ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 29–3–2015

# ಪತ್ರಿಕಾ ಪ್ರಕಟಣೆ

## ಎನ್.ಹೆಚ್–218 ಹಾಗೂ ಎನ್.ಹೆಚ್–234 ಅಭಿವೃದ್ಧಿ ಕಾಮಗಾರಿಗೆ ಅಡಿಗಲ್ಲು

ಬೆಂಗಳೂರು, ಮಾರ್ಚ್ 29 (ಕರ್ನಾಟಕ ವಾರ್ತೆ):

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು, ಕೇಂದ್ರ ಸಾರಿಗೆ ಇಲಾಖೆ ಹಾಗೂ ರಾಜ್ಯ ಲೋಕೋಪಯೋಗಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಹೆದ್ದಾರಿ ಬಿಜಾಪುರ–ಗುಲ್ಬರ್ಗ–ಹುಮಾನ್‌ಬಾದ್ (ಎನ್.ಹೆಚ್–218) ವಿಭಾಗ ಹಾಗೂ ಮಧುಗಿರಿ–ಗೌರಿಬಿದನೂರು–ಚಿಕ್ಕಬಳ್ಳಾಪುರ–ಚಿಂತಾಮಣಿ–ಮುಳಬಾಗಿಲು (ಎನ್.ಹೆಚ್.234) ವಿಭಾಗದ ಅಭಿವೃದ್ಧಿ ಮತ್ತು ಉನ್ನತೀಕರಣ ಕಾಮಗಾರಿಗೆ ಅಡಿಗಲ್ಲು ಹಾಕುವ ಕಾರ್ಯಕ್ರಮವನ್ನು ದಿನಾಂಕ: 31–3–2015 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರು ನಗರದ ಹೋಟೆಲ್ ಐಟಿಸಿ– ವಿಂಡ್ಸರ್ ಮ್ಯಾನರ್, ಗಾಲ್ಫ್ ರಸ್ತೆ ಇಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಕಾಮಗಾರಿಯು ಎನ್.ಹೆಚ್.ಡಿ.ಪಿ ನಾಲ್ಕನೇ ಹಂತದ ಬಿಜಾಪುರ–ಗುಲ್ಬರ್ಗ–ಹುಮಾನ್‌ಬಾದ್ ಎನ್.ಹೆಚ್–218 ರ ಭಾಗವಾದ ಹೊಸ ಎನ್.ಹೆಚ್–50 ನ 195 ಕಿ.ಮೀ ರಿಂದ 418 ಕಿ.ಮೀ ವರೆಗೆ ಎರಡು ಪಥ ರಸ್ತೆ ಹಾಗೂ ಪೇವ್ಡ್ ಶೋಲ್ಡರ್ಸ್‌ಗಳನ್ನು ಅಳವಡಿಸುವುದನ್ನು ಹೊಂದಿರುತ್ತದೆ ಹಾಗೂ ಎನ್.ಹೆಚ್.ಐ.ಐ.ಪಿ ಮೊದಲನೇ ಹಂತದ ಮಧುಗಿರಿ–ಗೌರಿಬಿದನೂರು–ಚಿಕ್ಕಬಳ್ಳಾಪುರ–ಚಿಂತಾಮಣಿ–ಮುಳಬಾಗಿಲು ಎನ್.ಹೆಚ್.234 ರ ಭಾಗವಾದ ಹೊಸ ಎನ್.ಹೆಚ್–69 ನ 343.800 ಕಿ.ಮೀ ರಿಂದ 483.151 ಕಿ.ಮೀ ವರೆಗೆ ಪುನರ್‌ವಸತಿ ಹಾಗೂ ಮೇಲ್ದರ್ಜೆಗೇರಿಸಲು ಎರಡು ಪಥ/ಎರಡು ಪಥ ರಸ್ತೆ ಹಾಗೂ ಪೇವ್ಡ್ ಶೋಲ್ಡರ್ಸ್‌ಗಳನ್ನು ಅಳವಡಿಸುವುದನ್ನು ಹೊಂದಿರುತ್ತದೆ.

ಕೇಂದ್ರ ರಸ್ತೆ ಸಾರಿಗೆ ಹಾಗೂ ರಾಷ್ಟ್ರೀಯ ಬಂದರೂ ಸಚಿವ ನಿತಿನ್ ಜಯರಾಮ ಗಡ್ಕರಿ ಅವರು ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್–218 ಹಾಗೂ ಎನ್.ಹೆಚ್.234 ಕ್ಕೆ ಅಡಿಗಲ್ಲು ಹಾಕುವರು. ಮುಖ್ಯ ಅತಿಥಿಗಳಾಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ರಸಗೊಬ್ಬರ ಮತ್ತು ರಾಸಾಯನಿಕ ಸಚಿವ ಅನಂತಕುಮಾರ್, ಕೇಂದ್ರ ಕಾನೂನು ಸಚಿವ ಡಿ.ವಿ.ಸದಾನಂದಗೌಡ, ಕೇಂದ್ರ ಬೃಹತ್ ಕೈಗಾರಿಕಾ ಮತ್ತು ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವ ಜಿ.ಎಂ.ಸಿದ್ದೇಶ್ವರ, ರಾಜ್ಯ ಲೋಕೋಪಯೋಗಿ ಸಚಿವ, ಡಾ॥ ಹೆಚ್.ಸಿ.ಮಹದೇವಪ್ಪ ಹಾಗೂ ಇತರೆ ಗಣ್ಯ ವ್ಯಕ್ತಿಗಳು ಭಾಗವಹಿಸಲಿದ್ದಾರೆ.

ಸೌಮ್ಯ/ಪ.ಹೊ

# FOUNDATION STONE LAYING FOR DEVELOPMENT WORKS AT NH-218 & NH-234 BY UNION TRANSPORT MINISTER

Bengaluru, Mar 29 ( Karnataka News) :

Union Minister of Road Transport and Highways Shipping Nitin Jairam Gadkari will lay Foundation Stone for development works of NH-218 and NH-234 on 31st March 2015 at 10 am at Hotel ITC-Windsor Manor, Windsor Square, Near Golf Course, Bengaluru.

National Highway Authority of India, Ministry of Road Transport, Highways and Shipping will undertake development and upgradation of Bijapur-Gulbarga-Humnabad section of NH-218 and Madhugiri-Gowribidnur-Chikkaballapura-Chintamani-Mulbagal section of NH-234. The works include the upgradation of NH-218 (New NH-50) to 2-lane along with paved shoulders from km195 to km 418 under NHDP phase- 4. While, the NH-234 (New NH-69) will have rehabilitation and upgradation works of 2 lane/2 lane with paved shoulders.

Chief Minister Siddaramaiah will be the chief guest at the foundation laying ceremony and Union Minister of Chemicals and Fertilizers Ananthkumar, Union Minister of Law and Justice D.V.Sadananda Gowda, Union Minister of State for Heavy Industries and Public Enterprises, G.M.Siddeshwara and Minister of State Public Works, Ports and Inland Water Transport Dr.H.C.Mahadevappa will guests of honour.

ಸೌಮ್ಯ/ಪ.ಹೊ